# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 866 |
| 2) | ಸದಸ್ಯರ ಹೆಸರು | : | ಶ್ರೀ. ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ: | : | 21.09.2022 |
| 4) | ಉತ್ತರಿಸುವವರು | : | ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆ ಕುರುಗೋಡಿನಿಂದ ಕುಡಿತಿನಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ನಿರ್ಮಿಸುತ್ತಿರುವ ರೈಲ್ವೆ ಮೇಲ್ಸೇತುವೆ ಕಾಮಗಾರಿಯು ಪ್ರಾರಂಭಗೊಂಡಿದ್ದು ಯಾವಾಗ, ಪ್ರಸ್ತುತ ಕಾಮಗಾರಿಯ ಪ್ರಗತಿ ಕಾರ್ಯ ಯಾವ ಹಂತದಲ್ಲಿದೆ; ಸದರಿ ಸೇತುವೆಯ ಉದ್ದವೆಷ್ಟು; ಇದಕ್ಕೆ ಬಿಡುಗಡೆಯಾದ ಅನುದಾನ ಹಾಗೂ ಖರ್ಚಾದ ಹಣವೆಷ್ಟು; (ಪೂರ್ಣ ಮಾಹಿತಿ ನೀಡುವುದು) | ಹೊಸಪೇಟೆ-ಬಳ್ಳಾರಿ ರೈಲ್ವೆ ಸೆಕ್ಷನ್‌ನ ಕುಡುತಿನಿ ಯಾರ್ಡ್‌ನಲ್ಲಿ ಬರುವ ರೈಲ್ವೆ ಲೆವಲ್ ಕ್ರಾಸಿಂಗ್ ಗೇಟ್ ಸಂಖ್ಯೆ:102ರ ಬದಲಿಗೆ ರಸ್ತೆ ಮೇಲ್ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯನ್ನು ರೈಲ್ವೆ ಮಂತ್ರಾಲಯದೊಂದಿಗಿನ ವೆಚ್ಚ ಹಂಚಿಕೆ ಮೂಲಕ ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರವು 2018ರಲ್ಲಿನ ಅನುಮೋದನೆ ನೀಡಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ. 26,36,05,876/-ಗಳಾಗಿದ್ದು, ಇದರಲ್ಲಿ ರೈಲ್ವೆ ಪಾಲು ರೂ. 13,18,02,938/- ಗಳು ಹಾಗೂ ರಾಜ್ಯ ಸರ್ಕಾರದ ಪಾಲು ರೂ. 13,18,02,938/- ಗಳಾಗಿರುತ್ತದೆ. ಈ ಯೋಜನೆಗೆ ರಾಜ್ಯ ಸರ್ಕಾರವು ತನ್ನ ಪಾಲಿನ ಮೊತ್ತ ರೂ.13.32 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಈ ಕಾಮಗಾರಿಯನ್ನು ರೈಲ್ವೆ ಇಲಾಖೆಯು ನಿರ್ಮಿಸುತ್ತಿರುವುದರಿಂದ ಅವರಿಂದ ಪಡೆದ ಯೋಜನೆಯ ಹಂತದ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.<br><br>**ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿಯ ಅನುಸಾರ:-**<br><br>ಕುರುಗೋಡು-ಕುಡಿತಿನಿ ರಸ್ತೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯ ಮೇಲ್ಸೇತುವೆಯನ್ನು ದಿನಾಂಕ 5.10.2018 ರಂದು ಪ್ರಾರಂಭಿಸಲಾಗಿದೆ. ಈ ರೈಲ್ವೆ ಮೇಲ್ಸೇತುವೆಯ ಒಟ್ಟು ಉದ್ದ 773.47 ಮೀಟರ್. ಈ ಯೋಜನೆಗೆ ರೈಲ್ವೆ ಇಲಾಖೆಯಿಂದ ರೂ.21.32 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇಲ್ಲಿಯವರೆಗಿನ ಸಂಚಿತ ವೆಚ್ಚ ರೂ.16,39,48,414/-ಗಳಾಗಿರುತ್ತದೆ. |

..2)

| | | |
|---|---|---|
| | | ಈಗ ಈ ಕೆಲಸವು ಮುಕ್ತಾಯದ ಹಂತದಲ್ಲಿದ್ದು, ಎರಡೂ ಅಪ್ರೋಚ್ ಗಳು ಪೂರ್ಣಗೊಂಡಿವೆ. ಪಿಯರ್‌ಗಳು ಸಹ ಸಿದ್ಧವಾಗಿವೆ. Main Girder ಗಳು ತಯಾರಿಕಾ ಹಂತದಲ್ಲಿವೆ (42 ಮೀಟರ್ ನ 2 ಸ್ಪ್ಯಾನ್‌ಗಳು ಮತ್ತು 60 ರ 1 ಸ್ಪ್ಯಾನ್). |
| ಆ) | ಈ ರೈಲ್ವೆ ಮೇಲ್ಸೇತುವೆ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಾರಣಗಳೇನು; ಈ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಇರುವ ತೊಂದರೆಗಳೇನು; ಯಾವ ಕಾಲಮಿತಿಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಓಡಾಡಲು ಅವಕಾಶ ಮಾಡಿಕೊಡಲಾಗುವುದು? | ಕೋವಿಡ್-19 ಸಾಂಕ್ರಮಿಕ ರೋಗದ ಕಾರಣದಿಂದಾಗಿ ಈ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿದೆ ಮತ್ತು ಇದರ ಪರಿಣಾಮವಾಗಿ ಅಗತ್ಯವಾದ ಉಕ್ಕಿನ ಕೊಳ್ಳುವಿಕೆ ಮತ್ತು ಆರ್.ಡಿ.ಎಸ್.ಓ ಕಡ್ಡಾಯ ತಪಾಸಣೆಯಲ್ಲಿ ವಿಳಂಬವಾಗಿದೆ. ಗರ್ಡರ್ ತಯಾರಿಕೆಯ ಅಡಚಣೆಯನ್ನು ಈಗ ಪರಿಹರಿಸಲಾಗಿದ್ದು, ಈ ಕೆಲಸ ಪ್ರಗತಿಯಲ್ಲಿದೆ. ದಿನಾಂಕ: 31.03.2023 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |

ಸಂಖ್ಯೆ: ಮೂಅಇ 223 ರಾರಾಹೆ 2022/ಇ

**(ವಿ.ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು